**2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ನೇಮಕಾತಿ ರದ್ದು ಪಡಿಸಿರುವ ಕುರಿತು.**

- ದಿನಾಂಕ: 03.11.2011 ರಂದು ಕರ್ನಾಟಕ ಲೋಕಸೇವಾ ಆಯೋಗವು 362 ಗೆಜೆಟೆಡ್ ಪ್ರೊಬೇಷನರ್‌ಗಳ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿದ್ದು, ಪ್ರಿಲಿಮ್ಸ್ ಪರೀಕ್ಷೆ ದಿನಾಂಕ: 22.04.2012 ರಂದು ನಡೆಸಿದೆ.
- ಮುಖ್ಯ ಪರೀಕ್ಷೆಯನ್ನು ದಿನಾಂಕ: 15.12.2012 ರಿಂದ 06.01.2013 ರವರೆಗೆ ನಡೆದಿದ್ದು, ಫಲಿತಾಂಶವನ್ನು ದಿನಾಂಕ: 16.03.2013 ರಂದು ಪ್ರಕಟಗೊಳಿಸಿದೆ.
- ಮುಖ್ಯ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ಸಂದರ್ಶನವನ್ನು ದಿನಾಂಕ: 01.04.2013 ರಿಂದ 24.04.2013 ರವರೆಗೆ ನಡೆಸಲು ಸಂದರ್ಶನವನ್ನು ನಿಗಧಿಪಡಿಸಿ, ಅದರಂತೆ ದಿನಾಂಕ:01.04.2013 ಮತ್ತು 02.04.2013 ರಂದು ಸಂದರ್ಶನ ನಡೆಸಿರುತ್ತದೆ.
- ದಿನಾಂಕ: 27.03.2013 ರಂದು ಮೂವರು ರಾಜ್ಯ ಚುನಾವಣಾ ಆಯೋಗಕ್ಕೆ ಮನವಿ ನೀಡಿ, ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ನಡೆಯುತ್ತಿದ್ದು, ಅಭ್ಯರ್ಥಿಗಳಿಂದ ರಾಜಕೀಯ ಪಕ್ಷಗಳು ನಿಧಿ ಸಂಗ್ರಹಿಸುವ ಸಂಭವವಿದ್ದು, ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆ ನಡೆಸಲು ನೀತಿ ಸಂಹಿತೆ ಉಲ್ಲಂಘನೆಯಾಗುವುದರಿಂದ ಆಯೋಗವು ನಿಗಧಿಪಡಿಸಿರುವ ಸಂದರ್ಶನವನ್ನು ಮುಂದೂಡುವಂತೆ ಮುಖ್ಯ ಚುನಾವಣಾ ಆಯುಕ್ತರಿಗೆ ಮನವಿ ಮಾಡಿರುತ್ತಾರೆ.
- ದಿನಾಂಕ: 01.04.2013 ರಂದು ಮುಖ್ಯ ಚುನಾವಣಾ ಆಯುಕ್ತರಾದ ಅನಿಲ್ ಕುಮಾರ್ ಝಾ ರವರು ರಾಜ್ಯದ ಮುಖ್ಯ ಕಾರ್ಯದರ್ಶಿರವರಿಗೆ ಪತ್ರ ಬರೆದು ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವಾಗ ಹೊಸ ನೇಮಕಾತಿಗಳ ಮೇಲೆ ನಿಷೇಧವಿರುವುದರಿಂದ ರಾಜ್ಯ ಸರ್ಕಾರ ಆಯೋಗಕ್ಕೆ ಚುನಾವಣೆ ಮುಗಿಯುವವರೆಗೆ ಸಂದರ್ಶನವನ್ನು ನಿಲ್ಲಿಸಲು ಸೂಚನೆ ನೀಡುವಂತೆ ಕೋರಿರುತ್ತಾರೆ.
- ದಿನಾಂಕ: 23.03.2013 ರಂದು Chief electoral officer Anil Kumar Jha in his letter has stated that purely statutory process where all the actions are being taken as per the act and rules shall continue to be taken, without allowing subjectivity.
- ಹೊಸದಾಗಿ ನೇಮಕಾತಿಗೆ ಅಧಿಸೂಚನೆ ಹೊರಡಿಸಲು ಅವಕಾಶವಿಲ್ಲ. ಆದರೆ ಆಯೋಗವು ಸಂವಿಧಾನಿಕ ಸಂಸ್ಥೆಯಾಗಿದ್ದು, ಸಂದರ್ಶನ ನಡೆಸುವುದು ಮಾದರಿ ನೀತಿ ಸಂಹಿತೆಯ ವ್ಯಾಪ್ತಿಯೊಳಗೆ ಬರುವುದಿಲ್ಲ.

- ದಿನಾಂಕ: 05.03.2009 ರ ಭಾರತ ಚುನಾವಣಾ ಆಯೋಗದ ಪತ್ರ ಸಂಖ್ಯೆ:437/06/2009 ರನ್ವಯ ಯುಪಿಎಸ್‌ಸಿ ಅಥವಾ ರಾಜ್ಯ ಲೋಕಸೇವಾ ಆಯೋಗ ನೇಮಕಾತಿಯು ಮಾದರಿ ನೀತಿ ಸಂಹಿತೆ ವ್ಯಾಪ್ತಿಯಲ್ಲಿ ಬರುವುದಿಲ್ಲ.
- ದಿನಾಂಕ: 30.03.2013 ರಂದು ಆಯೋಗದ ಕಾರ್ಯದರ್ಶಿರವರು ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಚುನಾವಣಾ ಆಯೋಗದ ಸೂಚನೆಗಳನ್ನು ಆಯೋಗವು ಕೂಲಂಕುಷವಾಗಿ ಪರಿಶೀಲಿಸಿದ್ದು, ದಿನಾಂಕ: 01.04.2013 ರಿಂದ 24.04.2013 ರವರೆಗೆ ನಿಗಧಿಪಡಿಸಿರುವ ವ್ಯಕ್ತಿತ್ವ ಪರೀಕ್ಷೆ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ತೀರ್ಮಾನಿಸಿದೆ ಎಂದು ತಿಳಿಸಿರುತ್ತಾರೆ.
- ದಿನಾಂಕ: 02.04.2013 ರಂದು ಒಂದೇ ದಿನ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಂಜೀವ್ ಕುಮಾರ್ ರವರು ಆಯೋಗದ ಕಾರ್ಯದರ್ಶಿಗೆ ಎರಡು ಅರೆ ಸರ್ಕಾರಿ ಪತ್ರ ಬರೆದು ಆಯೋಗವು ಸಂದರ್ಶನವನ್ನು ತಕ್ಷಣ ನಿಲ್ಲಿಸದೇ ಇದ್ದಲ್ಲಿ, ಆಯೋಗವು ಮೌಖಿಕ ಸಂದರ್ಶನವನ್ನು ತರುವಾಯದ ಉದ್ದೇಶದಿಂದ ನಡೆಸುತ್ತಿದೆ ಎಂದು ಸರ್ಕಾರವು ಅನಿವಾರ್ಯವಾಗಿ ಪರಿಗಣಿಸಬೇಕಾಗುತ್ತದೆ ಎಂದು ಎಚ್ಚರಿಸಿರುತ್ತದೆ.
- ಅದರಂತೆ, ಆಯೋಗವು ಮೌಖಿಕ ಸಂದರ್ಶನವನ್ನು ಮುಂದೂಡಿರುತ್ತದೆ.
- ನಂತರ ಕೆಲ ಅಭ್ಯರ್ಥಿಗಳು ಸಂದರ್ಶನ ನಡೆಸುವುದು ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯಾಗುವುದಿಲ್ಲವೆಂದು ಕೆಎಟಿಯಲ್ಲಿ ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ, ಕೆಎಟಿ ನಿರ್ದೇಶನದ ಮೇರೆಗೆ ಸಂದರ್ಶನವನ್ನು ದಿನಾಂಕ: 07.05.2013 ರಿಂದ 27.05.2013 ರವರೆಗೆ ನಡೆಸಿರುತ್ತದೆ.
- ದಿನಾಂಕ: 05.03.2014 ರಂದು ತಾತ್ಕಾಲಿಕ ಪಟ್ಟಿಯನ್ನು ಮತ್ತು ದಿನಾಂಕ: 21.03.2014 ರಂದು ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿರುತ್ತದೆ.
- ದಿನಾಂಕ: 24.05.2013 ರಂದು ಡಾ: ಮೈತ್ರಿ. ಹೆಚ್.ಪಿ.ಎಸ್. ರವರು ಅಡ್ವೋಕೇಟ್ ಜನರಲ್ ರವರಿಗೆ ಕನ್ನಡದಲ್ಲಿ ಟೈಪ್ ಮಾಡಿದ ಒಂದು ದೂರನ್ನು ನೀಡಿದಾಗ, ಅಡ್ವೊಕೇಟ್ ಜನರಲ್ ರವರು ಮೈತ್ರಿ ರವರಿಗೆ ಡಿಕ್ಟೇಷನ್ ನೀಡಿ, ಕೈ ಬರಹದಲ್ಲಿ ಇಂಗ್ಲೀಷ್‌ನಲ್ಲಿ ಮತ್ತೊಂದು ದೂರನ್ನು ದಿನಾಂಕ: 28.05.2013 ರಂದು ಪಡೆದಿರುತ್ತಾರೆ.
- ದಿನಾಂಕ: 27.05.2013 ರಂದು ಗಂಗಾಧರಯ್ಯ ಎಂಬ ಅನಾಮದೇಯ ವ್ಯಕ್ತಿ ಮಲ್ಲೇಶ್ವರಂ ಅಂಚೆ ಕಛೇರಿಯಿಂದ ಎ.ಜಿ. ರವರಿಗೆ ದೂರನ್ನು ರವಾನಿಸಿರುತ್ತಾರೆ. ಸದರಿ ದಿನದಂದು ಮೈತ್ರಿ ರವರ ದೂರವಾಣಿ ಮಲ್ಲೇಶ್ವರಂ ಮೊಬೈಲ್ ಟವರ್ ವ್ಯಾಪ್ತಿಯಲ್ಲಿ ಕಂಡುಬಂದಿದ್ದು, ಗಂಗಾಧರಯ್ಯ ಎಂಬ ವ್ಯಕ್ತಿಯೇ ಇರುವುದಿಲ್ಲ.

- ನೊಂದ ಅಭ್ಯರ್ಥಿ ಎನ್ನಲಾದವರು ಆಯೋಗಕ್ಕಾಗಲೀ, ಸರ್ಕಾರಕ್ಕಾಗಲೀ ದೂರನ್ನು ನೀಡದೇ ಅಡ್ವೊಕೇಟ್ ಜನರಲ್ ರವರಿಗೆ ದೂರು ನೀಡಿರುವುದು ಸಂಶಯಾಸ್ಪದ.

  First of its kind in the history of karnataka.

- ತಮಿಳುನಾಡಿನಲ್ಲಿ ರಾಜ್ಯ ಸರ್ಕಾರ ಬದಲಾದಾಗ ಅಲ್ಲಿನ ಮುಖ್ಯಮಂತ್ರಿ ರವರು ತಮಿಳುನಾಡಿನ ಆಯೋಗದ ಸದಸ್ಯರನ್ನು ಬದಲಾಯಿಸಲು ಮುಂದಾದಾಗ ಸದರಿ ಅಡ್ವೊಕೇಟ್ ಜನರಲ್ ರವರು ನ್ಯಾಯಾಲಯದಲ್ಲಿ ಆಯೋಗದ ಸದಸ್ಯರ ಪರ ವಾದ ಮಾಡಿ, ಆಯೋಗದ ಅಧ್ಯಕ್ಷ ಮತ್ತು ಸದಸ್ಯರಿಗೆ ರಾಜ್ಯ ಹೈಕೋರ್ಟ್‌ನ ನ್ಯಾಯಾಧೀಶರಿಗಿಂತ ಹೆಚ್ಚಿನ ಇಮ್ಯುನಿಟಿ ಇದ್ದು, ಯಾವುದೇ ದೂರು ಇದ್ದಾಗ ಕೂಡ ರಾಷ್ಟ್ರಪತಿ ರವರು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಿಂದ ಆರು ತಿಂಗಳೊಳಗೆ ತನಿಖೆ ಮಾಡಿ, ಆಪಾದನೆಗಳು ರುಜುವಾತಾದಲ್ಲಿ ಸಂಸತ್‌ನಲ್ಲಿ ಮಂಡಿಸಿ, ಎರಡನೇ ಮೂರರಷ್ಟು ಬಹುಮತದೊಂದಿಗೆ ಮಾತ್ರ ಸದಸ್ಯತ್ವ ರದ್ದುಪಡಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ ಎಂದು ವಾದಿಸಿರುತ್ತಾರೆ. ಇದು ಸಂವಿಧಾನದಲ್ಲಿ ಇದೆ.

- ಆದರೆ, ಸದರಿ ಪ್ರಕರಣದಲ್ಲಿ ಸರ್ಕಾರ ಅಭಿಪ್ರಾಯ ಕೇಳದಿದ್ದರೂ ಅಭಿಪ್ರಾಯ ನೀಡಿರುವುದು ಅಡ್ವೋಕೇಟ್ ಜನರಲ್ ರವರ ಕರ್ತವ್ಯ ಲೋಪವಾಗಿದೆ.

- ದಿನಾಂಕ: 22.06.2013 ರಂದು ಗಂಗಾಧರಯ್ಯ ಮತ್ತು ಮೈತ್ರಿ ರವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಮಾಡುವಂತೆ ವಿಧಾನಸೌಧ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ರವರಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಪತ್ರ ಬರೆಯಲಾಗಿದೆ.

- ಆದರೆ ಗಂಗಾಧರಯ್ಯ ಯಾರು, ಅವರ ಐಡೆಂಟಿಟಿ ಅಥವಾ ವಿಳಾಸದ ಬಗ್ಗೆ ಯಾವುದೇ ವಿವರ ಇಲ್ಲ.

- ಅಡ್ವೊಕೇಟ್ ಜನರಲ್ ರವರ ಅಭಿಪ್ರಾಯ ಮತ್ತು ಸಿಐಡಿ ವರದಿಯನ್ನು ಅನುಸರಿಸಿ, ದಿನಾಂಕ: 15.10.2013 ರಂದು ಸರ್ಕಾರವು ಮುಖ್ಯ ಪರೀಕ್ಷೆಯ ಮೌಲ್ಯಮಾಪನ ಮತ್ತು ಮೌಖಿಕ ಸಂದರ್ಶನದಲ್ಲಿ ನೀಡಿದ ಅಂಕಗಳನ್ನು ರದ್ದುಪಡಿಸಿ, ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮರು ಮೌಲ್ಯ ಮಾಪನ ಮಾಡಲು ನಿರ್ದೇಶನ ನೀಡಿರುತ್ತದೆ.

- ದಿನಾಂಕ: 25.06.2013 ರಂದು ಅಪರಾಧ ಸಂಖ್ಯೆ: 28/2013 ರನ್ವಯ ಎಫ್.ಐ.ಆರ್.ದಾಖಲಾಗಿದ್ದು, ಗೋನಾಳ್ ಭೀಮಪ್ಪ, ಅರುಣಾಚಲಂ, ಸುಂದರ್, ಮಂಗಳ ಶ್ರೀಧರ್, ಅಶೋಕ್ ಕುಮಾರ್, ಸುಧೀರ್, ಸೋಮನಾಥ್ ಮತ್ತು ರಾಜಶೇಖರ್ ರವರುಗಳನ್ನು ಆರೋಪಿಗಳನ್ನಾಗಿ ಮಾಡಲಾಗಿದೆ.

- ಸರ್ಕಾರ ಇತ್ತೀಚೆಗೆ ಗೃಹ ಸಚಿವರಿಗೆ ಸಲಹೆಗಾರರೆಂದು ನೇಮಿಸಿರುವ ಕೆಂಪಯ್ಯ ರವರ ಅಳಿಯನ ಭಾವ ಶ್ರೀ ಚಂದ್ರಶೇಖರ್ ರವರನ್ನು ಕಾಡು ಕುರುಬ ಎಂದು ಪರಿಶಿಷ್ಟ ಪಂಗಡದ ಕೋಟದಲ್ಲಿ ಡಿವೈ.ಎಸ್.ಪಿ. ಮಾಡುವಂತೆ ಕೆಂಪಯ್ಯ ರವರು ಕೆಪಿಎಸ್‌ಸಿ ಯ ಅಧ್ಯಕ್ಷ ಮತ್ತು ಸದಸ್ಯರಿಗೆ ದೂರವಾಣಿ ಕರೆ ಮಾಡಿ, ಪ್ರಭಾವ ಬೀರಿರುತ್ತಾರೆ. ಪರಿಶಿಷ್ಟ ಪಂಗಡದಡಿ ಸೋಲಿಗ ಜಾತಿಯ ರವಿರಾಮಯ್ಯ, ಡಿವೈ.ಎಸ್.ಪಿ. ಆಗಿ ಆಯ್ಕೆಯಾಗಿರುತ್ತಾರೆ.
- ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿ ರವರು ನೇಮಕಾತಿ ಸಂಬಂಧ 76 ಬಾರಿ ದೂರವಾಣಿ ಕರೆ ಮಾಡಿರುತ್ತಾರೆ. ಆದರೆ ಸಿಐಡಿ ವರದಿಯಲ್ಲಿ ಮುಖ್ಯಮಂತ್ರಿ ರವರು ಕರೆ ಮಾಡಿರುವ ವಿವರ ಇಲ್ಲ.
- ಸಂವಿಧಾನದಡಿ ಕೆಲಸ ನಿರ್ವಹಿಸುವುದಾಗಿ ಪ್ರಮಾಣ ವಚನ ಸ್ವೀಕರಿಸಿರುವ ಮುಖ್ಯಮಂತ್ರಿ ಸಾಂವಿಧಾನಿಕ ಸಂಸ್ಥೆಯ ಕೆಲಸ ನಿರ್ವಹಣೆಯಲ್ಲಿ ಪ್ರಭಾವ ಬೀರಿರುವುದು ಸಂವಿಧಾನ ಬಾಹಿರ ಚಟುವಟಿಕೆ.
- ಕಾರ್ಯದರ್ಶಿರವರು ಆಯೋಗದ ಎಕ್ಸಿಕ್ಯೂಟಿವ್ ಮುಖ್ಯಸ್ಥರಾಗಿದ್ದು, ಸದರಿಯವರಿಗೆ 1 ಕೋಟಿ ರಹಸ್ಯ ನಿಧಿಯಿದ್ದು, ಸದರಿಯವರು ಯಾವುದೇ ನೇಮಕಾತಿಗೆ ಸಂಬಂಧಿಸಿದಂತೆ ಅರ್ಜಿ ಕರೆಯುವುದು, ಪ್ರಶ್ನೆ ಪತ್ರಿಕೆ ಸಿದ್ದಪಡಿಸುವುದು, ಸಂದರ್ಶನ ನಿಗಧಿಪಡಿಸುವುದು, ಮೌಲ್ಯಮಾಪನ ಮಾಡಿಸುವುದು, ಪರೀಕ್ಷೆ ನಡೆಸುವುದು ಮತ್ತು ಫಲಿತಾಂಶ ಪ್ರಕಟ ಮಾಡುವುದು ಜವಾಬ್ದಾರಿ ಮತ್ತು ಕರ್ತವ್ಯ. ಈ ಕರ್ತವ್ಯಗಳನ್ನು ನಿಭಾಯಿಸುವಾಗ ಆಯೋಗದ ಅನುಮತಿಯನ್ನು ಕೋರುವಂತಿಲ್ಲ.
- ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ಕರ್ತವ್ಯ ಸಂದರ್ಶನ ಮಾಡುವುದಷ್ಟೇ. ಆಯೋಗದ ಆಡಳಿತದಲ್ಲಿ ಮೂಗು ತೂರಿಸುವಂತಿಲ್ಲ.
- ಉತ್ತರ ಪತ್ರಿಕೆಗಳ ಮೌಲ್ಯ ಮಾಪನಕ್ಕಾಗಿ ಕಾರ್ಯದರ್ಶಿ ರವರು ವಿಶ್ವವಿದ್ಯಾನಿಲಯಗಳಿಗೆ ಪತ್ರ ಬರೆದು, ಮೌಲ್ಯ ಮಾಪಕರ ವಿವರಗಳನ್ನು ರಹಸ್ಯವಾಗಿ ಸಂಗ್ರಹಿಸಿ, ಮೌಲ್ಯಮಾಪನ ಕೆಲಸವನ್ನು ಅವರ ಸುರ್ಪದಿಯಲ್ಲೇ ನಡೆಸಲಾಗುತ್ತಿದೆ.
- ಯಾವುದೇ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನ ನ್ಯಾಯಾಲಯದ ಆದೇಶವಿಲ್ಲದೆ ಮಾಡುವಂತಿಲ್ಲ. ಆದರೆ ಸಿಐಡಿ ಯವರು ಉತ್ತರ ಪತ್ರಿಕೆಗಳ ಮೌಲ್ಯ ಮಾಪನವನ್ನು ಮಾಡಿಸಿರುವುದಾಗಿ ವರದಿಯಲ್ಲಿ ತಿಳಿಸಿರುತ್ತಾರೆ. ಇದಕ್ಕೆ ನ್ಯಾಯಾಲಯದಿಂದ ಅನುಮತಿ ಪಡೆದಿರುವುದಿಲ್ಲ.
- ಇಲ್ಲಿ ಕಾರ್ಯದರ್ಶಿ ರವರು ಪ್ರಭಾವಕ್ಕೆ ಒಳಗಾಗಿ ನ್ಯಾಯಾಲಯದ ಅನುಮತಿ ಇಲ್ಲದಿದ್ದರೂ ಉತ್ತರ ಪತ್ರಿಕೆಗಳನ್ನು ಸಿ.ಐ.ಡಿ. ರವರಿಗೆ ಮರು ಮೌಲ್ಯ ಮಾಪನಕ್ಕೆ ನೀಡಿರುವುದು ಕಾನೂನು ಬಾಹಿರ.

- ಸದರಿ ಪ್ರಕರಣದಲ್ಲಿ ಮೂರನೇ ಆರೋಪಿಯಾಗಿರುವ ಕಾರ್ಯದರ್ಶಿ ರವರು ನಿರೀಕ್ಷಣಾ ಜಾಮೀನು ಪಡೆಯದಿದ್ದರೂ, ಇದುವರೆವಿಗೂ ಬಂಧಿಸದಿರುವುದು ಸದರಿಯವರು ಸರ್ಕಾರದ ಅಣತಿಯಂತೆ ಕಾರ್ಯನಿರ್ವಹಿಸಿದ್ದಕ್ಕೆ ಬಹುಮಾನದಂತಿದೆ.
- ದಿನಾಂಕ: 27.06.2013 ರಂದು ಪ್ರಕರಣದ ವಿಚಾರಣೆಯನ್ನು ಸಿಐಡಿ ಗೆ ವಹಿಸಿದ್ದು, ಸಿಐಡಿ ಯು ದಿನಾಂಕ:10.09.2013 ರಂದು ಸರ್ಕಾರಕ್ಕೆ ವರದಿ ಸಲ್ಲಿಸಿದೆ.
- ಸಿ.ಐ.ಡಿ. ವರದಿಯಲ್ಲಿ ಹಣ ಕೊಟ್ಟ ಅಭ್ಯರ್ಥಿಗಳಿಗೆ ಹೆಚ್ಚು ಅಂಕ ನೀಡಲಾಗಿದೆ ಎಂದು ತಿಳಿಸಿದೆ. ಆದರೆ ಹಣ ಕೊಟ್ಟವರ ವಿವರ ಸಿಐಡಿ ವರದಿಯಲ್ಲಿ ಇಲ್ಲ.
- ಸಿಐಡಿ ವರದಿಯಲ್ಲಿ ಕನ್ನಡ ಇತಿಹಾಸ ಮೌಲ್ಯಮಾಪಕರು ಇಂಗ್ಲೀಷ್ ಇತಿಹಾಸ ಪತ್ರಿಕೆಯನ್ನು ಮೌಲ್ಯ ಮಾಪನ ಮಾಡಿರುವುದು ತಪ್ಪೆಂದು ತಿಳಿಸಿರುತ್ತಾರೆ. ಆದರೆ ಸರ್ಕಾರ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮಕ್ಕೆಂದು ಇತಿಹಾಸದ ಉಪನ್ಯಾಸಕ ಮತ್ತು ಪ್ರಾಧ್ಯಾಪಕರನ್ನು ನೇಮಿಸುವುದಿಲ್ಲ.
- ಆಂತ್ರೋಪಾಲಜಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ, ಸಮಾಜ ಶಾಸ್ತ್ರ ಮತ್ತು ಅರ್ಥಶಾಸ್ತ್ರ ಉಪನ್ಯಾಸಕರಿಂದ ಮೌಲ್ಯಮಾಪನ ಮಾಡಿಸಲಾಗಿದೆ ಎಂದು ಆರೋಪಿಸಲಾಗಿದೆ. ರಾಜ್ಯದಲ್ಲಿ ಆಂತ್ರೋಪಾಲಜಿ ಮತ್ತು ಗ್ರಾಮೀಣಾಭಿವೃದ್ಧಿ ಪದವಿ ಕೋರ್ಸ್‌ಗಳು ಇರುವುದಿಲ್ಲ. ಕೇವಲ ಸ್ನಾತಕೋತ್ತರ ವಿಷಯದಲ್ಲಿ ಇವೆ.
- ಅಡ್ವೊಕೇಟ್ ಜನರಲ್ ರವರು ಮಾಧ್ಯಮದಲ್ಲಿ ದೂರು ಬಂದ ಹಿನ್ನೆಲೆಯಲ್ಲಿ ಶ್ರೀ ಬಿ.ಕೆ.ಚಂದ್ರಶೇಖರ್ ರವರ ಆಪಾದನೆಯಂತೆ ಅಭ್ಯರ್ಥಿ ಮತ್ತು ಅವರ ಪೋಷಕರ ದೂರು ಮತ್ತು ಮುಖ್ಯಮಂತ್ರಿರವರು ದಿನಾಂಕ: 27.05.2013 ರಂದು ಅಭಿಪ್ರಾಯ ಕೋರಿದ್ದರ ಮೇರೆಗೆ ಅಡ್ವೊಕೇಟ್ ಜನರಲ್ ರವರು ದಿನಾಂಕ: 04.06.2013 ರಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ ಮಾಡುವ ಮುನ್ನವೇ ಅಭಿಪ್ರಾಯ ನೀಡಿರುತ್ತಾರೆ.
- ಕೆ.ಪಿ.ಎಸ್.ಸಿ. ರವರು 2005ನೇ ಸಾಲಿನಿಂದ ಎರಡು ಹಂತದ ಮೌಲ್ಯ ಮಾಪನ ಅಳವಡಿಸಿರುವುದು ಮತ್ತು ಬಾರ್‌ಕೋಡ್ ವ್ಯವಸ್ಥೆ ಇರುವುದರಿಂದ ಅಭ್ಯರ್ಥಿಯ ಉತ್ತರ ಪತ್ರಿಕೆಯನ್ನು ಪತ್ತೆ ಹಚ್ಚುವುದು ಕಷ್ಟವೆಂದು ಹೋಟಾ ಸಮಿತಿಯು ಪ್ಯಾರಾ 24 ರಲ್ಲಿ ವರದಿ ಮಾಡಿದೆ.
- Sri P.C.Hota (Former Chairman of UPSC) commit in its report in para 24 has stated as under.

  The Committee also had a detailed probe into the systems and procedures of the KPSC to maintain anonymity and

confidentiality of the written examinations of conventional essay type. The Committee is satisfied that due to the use of bar codes, it is virtually impossible to know the identity of any candidate from his answer script. The committee has noted with satisfaction that since the year 2005 the KPSC has introduced the scheme of double examiners for conventional essay type papers on recommendation of a committee presided over by K.K.Mishra, a former chief secretary to Govt of Karnataka under the double examiner system, if the variation in score of a candidate is more than 15 percent of the total marks allotted for the paper, the answer script is evaluated also by a third examiner. The average of the total of the nearest two marks is taken as the marks scored by a candidate.

- ಪಿ.ಎಸ್.ರಾಜಗೋಪಾಲ್, ಹಿರಿಯ ವಕೀಲರು ದಿನಾಂಕ: 15.10.2013 ರ ಸರ್ಕಾರಿ ಆದೇಶದ ಬಗ್ಗೆ ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತಾರೆ.

  a) That the Order dated 15.10.2013 passed by the Government is without jurisdiction and even otherwise untenable and the Commission is entitled to reject it.

  b) That from the contents of the CID report or otherwise if the Commission comes to conclude that case of any particular candidate requires to be examined on the touchstone of fairness, that is whether he or she has been a beneficiary of an undue favour of a victim of unmerited wrath, the Commission may from an Inquiry Committee to look into such cases and submit a report. On the basis of such report the Commission cancel the candidature of those candidates who have been beneficiaries of any un lawful consideration and render justice to those who have been victimised by a process of fresh interviews. By and large there is nothing in the report of the CID which would require re visiting the valuation of written main examination.

c) After taking these corrective measures as set out at clause (b) above, the Commission may publish a provisional select list, receive objections and finalise the list after considering the objections. Thereafter, it shall publish the final select list and forward the same to the Government. In the select list it must be made clear that in respect of those candidates whose selection is being further probed by the CID that their inclusion in the select list is subject to the outcome of the CID investigation in progress.

d) In terms of the extant Rules in force, after the publication of the select list, if any candidate goes out of the select list due to his ineligibility or otherwise, the vacancy will be carried forward to the next recruitment and, therefore, no prejudice will be caused to anybody by publication of the select list only on the ground that CID investigation is in progress or it has submitted a draft charge sheet, which, in any event, is yet to be filed.

e) Of course on receiving the select list, the Government, if it finds the select list to be vitiated, for reasons to be recorded in writing, will be free to reject the list, subject, of course, to placing the matter before the State Legislature.

- ಮಾನ್ಯ ಮುಖ್ಯಮಂತ್ರಿ ರವರು ಮತ್ತು ಅಡ್ವೊಕೇಟ್ ಜನರಲ್ ರವರು ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು ಸಾಂವಿಧಾನಿಕ ಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ಪ್ರಭಾವ ಬೀರಿ ತಮಗೆ ಮತ್ತು ತಮ್ಮ ಆಪ್ತರಿಗೆ ಬೇಕಾದವರನ್ನು ಆಯ್ಕೆ ಮಾಡಿಸಲು ಪ್ರಭಾವ ಬೀರಿದ್ದು, ಅಧಿಕಾರದ ದುರುಪಯೋಗ ಮಾಡಿಕೊಂಡಿರುವುದರಿಂದ ಮಾನ್ಯ ಮುಖ್ಯಮಂತ್ರಿ ರವರು ಕೂಡಲೇ ರಾಜೀನಾಮೆ ನೀಡಬೇಕು.